# ಶತಾವಧಾನಶಂಸನ



ಶತಾವಧಾನಸಮಿತಿ

# ಬಹುಮುಖವಿಭೂತಿ ಗಣೇಶ್

– ಡಾ॥ ಎಸ್. ರಂಗನಾಥ್
ಸಂಸ್ಕೃತ ಪ್ರಾಚಾರ್ಯರು
ಎನ್.ಎಂ.ಕೆ.ಆರ್.ವಿ. ಪ್ರಥಮ ದರ್ಜೆ ಮಹಿಳಾ ಕಾಲೇಜು

**ಅತುಲಿತಕವಿರಾಜಂ ಭವ್ಯಸದ್ವಾಕ್ಯರಾಶಿಂ ಸುಕೃತಶತವಧಾನಂ ಸೂರಿಸತ್ಪದ್ಯಮಿತ್ರಂ।**
**ವಿದಿತಸಕಲಲೋಕಂ ವಿದ್ವದಾನಂದಹೇತುಂ ಪರಮಸುಖದ ಶಂಭೋ ಪಾಲಯೈನಂ ಗಣೇಶಂ॥**

**– ಡಾ॥ ಜಿ. ಸದಾನಂದಶಾಸ್ತ್ರೀ, ಕನ್ನಡ-ತೆಲುಗು ಅಷ್ಟಾವಧಾನಿ**

ನನಗೆ ಶತಾವಧಾನಿ ರಾ.ಗಣೇಶ್ ಅವರ ಪರಿಚಯವಾದುದು ಸುಮಾರು ಮೂವತ್ತಮೂರು ವರ್ಷಗಳ ಹಿಂದೆ 1979ರಲ್ಲಿ ನನ್ನ ತಂದೆಯವರಾದ ಡಾ॥ ಎಸ್. ರಾಮಸ್ವಾಮಿಯವರ ಮುಖಾಂತರ. ಗಣೇಶ್ ಅವರು ಯು.ವಿ.ಸಿ.ಇ.ನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಓದುತ್ತಿದ್ದಾಗ ಪ್ರಥಮವರ್ಷ ಆಂಗ್ಲಭಾಷೆಯ ಕಡ್ಡಾಯಪತ್ರಿಕೆಯನ್ನು ನನ್ನ ತಂದೆಯವರು ಗಣೇಶ್‌ರವರ ವರ್ಗಕ್ಕೆ ಬೋಧಿಸುತ್ತಿದ್ದರು. ನನ್ನ ತಂದೆಯವರು ನನಗೆ ಹೇಳುತ್ತಿದ್ದರು – "ಗಣೇಶ್ ಎಂಬ ಅತ್ಯಂತ ಪ್ರತಿಭಾಶಾಲಿಯಾದ ವಿದ್ಯಾರ್ಥಿಗೆ ಬೋಧಿಸುವ ಸೌಭಾಗ್ಯ ನನ್ನದಾಗಿದೆ. ಅವನಿಗೆ ಸಂಸ್ಕೃತದಲ್ಲಿ ಶ್ಲೋಕರಚನೆ ಮಾಡುವ ಹವ್ಯಾಸವಿದ್ದು ನಮ್ಮ ಆರ್ಷೇಯಸಂಸ್ಕೃತಿಯ ಬಗೆಗೆ ಅಪಾರವಾದ ಶ್ರದ್ಧೆಯಿದೆ. ಒಂದು ದಿನ ನಾನು ಅವನನ್ನು ಮನೆಗೆ ಕರೆಯುತ್ತೇನೆ. ನೀನು ಅವನೊಂದಿಗೆ ಸಂವಾದ ನಡೆಸಿದರೆ ನಿನ್ನ ಸಂಸ್ಕೃತಜ್ಞಾನವೂ ವೃದ್ಧಿಯಾಗುತ್ತದೆ" ಎಂದು. ಅದರಂತೆಯೇ ಒಂದು ದಿನ ಗಣೇಶ್ ಅವರು ನಮ್ಮ ಮನೆಗೆ ಬಂದರು. ಹಣೆಯಲ್ಲಿ ತ್ರಿಪುಂಡ್ರ, ಕುಂಕುಮದಿಂದ ರಾರಾಜಿಸುತ್ತಿದ್ದ ಗಣೇಶ್‌ರು ಪ್ರಥಮನೋಟದಲ್ಲೇ ನನ್ನ ಮನಸೆಳೆದರು. ನನ್ನ ತಾಯಿ ಗಣೇಶ್ ಅವರಿಗೆ ಸದ್ಗೃಹಿಣಿಯಂತೆ ಉಪ್ಪಿಟ್ಟು-ಕಾಫಿ ನೀಡಿದರು. ಅದೇ ನನ್ನ ಹಾಗೂ ಗಣೇಶ್ ಅವರ ಸಂಪರ್ಕಕ್ಕೆ ನಾಂದಿಯಾಯಿತು. ನನ್ನ ತಂದೆಯವರು ಕಾಲೇಜಿನಲ್ಲಿ ಬೋಧಿಸಲು ಸೂಟು-ಬೂಟುಧಾರಿಯಾಗಿಯೇ ಹೋಗುತ್ತಿದ್ದರೂ, ಮನೆಯಲ್ಲಿ ದೇವತಾಪೂಜೆ, ಅನುಷ್ಠಾನ, ಗುರುಮುಖೇನ (ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಿ. ಎಸ್. ಸುಬ್ಬರಾಯಮಯ್ಯನವರ ಬಳಿ) ಪ್ರಸ್ಥಾನತ್ರಯ ಅಧ್ಯಯನ ಮಾಡಿದ್ದರಿಂದ ಮನೆಯಲ್ಲಿ ಪಾರಂಪರಿಕ ಭಾರತೀಯರಂತೆ ಪಂಚೆ, ಬ್ರಹ್ಮವಸ್ತ್ರದಲ್ಲಿದ್ದ ದೃಶ್ಯ ಸಹಜವಾಗಿಯೇ ಗಣೇಶ್ ಅವರ ಮೇಲೆ ಪರಿಣಾಮ ಬೀರಿ, ಆಂಗ್ಲಭಾಷೆಯ ಬಗೆಗೆ ಅವರಿಗಿದ್ದ ಪೂರ್ವಾಗ್ರಹ ಸ್ವಲ್ಪಮಟ್ಟಿಗೆ ಕಡಿಮೆಯಾಯಿತು. ವಾರಕ್ಕೆ ಒಂದೆರಡು ಬಾರಿಯಾದರೂ ಗಣೇಶ್ ಅವರು ನಮ್ಮ ಮನೆಗೆ ಅಂದಿನಿಂದ ಬರಲಾರಂಭಿಸಿದರು. ನನ್ನ ತಂದೆ ಹಾಗೂ ಗಣೇಶ್ ಅವರ ಸಂಭಾಷಣೆಯನ್ನು ಆಲಿಸುತ್ತಿದ್ದ ನನಗೆ ಇಬ್ಬರ ಬಗೆಗೂ ಗೌರವಭಾವ ಮೂಡಿದ್ದಲ್ಲದೆ, ನನ್ನ ಜ್ಞಾನವಿಕಾಸಕ್ಕೂ ಕಾರಣವಾಯಿತು.

ಈ ಸಂಪರ್ಕದ ಫಲವಾಗಿಯೇ ನಾನು ಗಣೇಶ್ ಅವರ ಕೈಯಲ್ಲಿ ನನ್ನ ಎರಡು ಕೃತಿಗಳಾದ Post Independence Sanskrit Drama ಹಾಗೂ Post Independence Dootakavya ಪುಸ್ತಕಗಳಿಗೆ ಮುಖಪುಟದ ಚಿತ್ರಗಳನ್ನು ಬರೆದುಕೊಡಲು ಬೇಡಿದಾಗ ಅವರು ಕೂಡಲೇ ತಮ್ಮ ಚಿತ್ರಕಲಾಕೌಶಲದಿಂದ ಬರೆದುಕೊಟ್ಟರು. ನಮ್ಮ

ಮೈತ್ರಿಯ ದ್ಯೋತಕವಾಗಿ ಗಣೇಶ್ ಅವರು ತಾವು ಬರೆದ ಪ್ರತಿಯೊಂದು ಪುಸ್ತಕವನ್ನೂ ತಮ್ಮ ಒಂದು ಪದ್ಯದೊಡನೆ ನನಗೆ ಕೊಡುತ್ತಿದ್ದರು.

ಗಣೇಶ್ ಅವರ 'ಮಧುಸದ್ಮ' ಎಂಬ ಸರ್ಜನಾತ್ಮಕ ಸಂಸ್ಕೃತಭಾಷಾಕೃತಿ ಆಧುನಿಕ ಸಂಸ್ಕೃತ-ಸಾಹಿತ್ಯಕ್ಕೆ ಒಂದು ಅಪೂರ್ವ ಕೊಡುಗೆಯಾಗಿದೆ. ಈ ಕೃತಿಯ ಲೋಕಾರ್ಪಣೆ 1989ರಲ್ಲಿ ಎನ್.ಎಂ.ಕೆ.ಆರ್.ವಿ. ಕಾಲೇಜಿನಲ್ಲಿ ಮಹಾಮಹೋಪಾಧ್ಯಾಯ ಎನ್. ರಂಗನಾಥಶರ್ಮರ ಅಧ್ಯಕ್ಷತೆಯಲ್ಲಿ ಡಾ॥ ಚಿ. ನ. ಮಂಗಳಾ ಅವರ ಸಮ್ಮುಖದಲ್ಲಿ ಸಂಸ್ಕೃತನಾಟಕೋತ್ಸವದ ಸಂದರ್ಭದಲ್ಲಿ ನಡೆದದ್ದು ನಿಜಕ್ಕೂ ಕೂಡ ನನ್ನ ಜೀವನದ ಒಂದು ಅವಿಸ್ಮರಣೀಯ ಘಟನೆ. ಈ ಕೃತಿಯಲ್ಲಿರುವ ವಿಷಯವೈವಿಧ್ಯತೆ ಯಾರನ್ನಾದರೂ ನಿಬ್ಬೆರಗಾಗಿಸುತ್ತದೆ. ಇದಲ್ಲದೆ ಗಣೇಶ್ ಅವರಿಂದ ರಚಿತವಾದ ಸಂಸ್ಕೃತಭಾಷಾಕೃತಿಗಳೆಂದರೆ:

* ಶ್ರೀಕೃಷ್ಣನನ್ನು ಕುರಿತಾದಂತಹ 103 ಶ್ಲೋಕಗಳಿಂದ ಕೂಡಿರುವ ಸ್ತೋತ್ರಕಾವ್ಯ 'ಶ್ರೀಕೃಷ್ಣಲಹರೀ'
* ಶಿವನನ್ನು ಕುರಿತಾದಂತಹ 51 ಶ್ಲೋಕಗಳಿಂದ ಕೂಡಿರುವ ಖಂಡಕಾವ್ಯ 'ಶ್ರೀಸಾಂಬಲಹರೀ',
* ಭರ್ತೃಹರಿಯ ಶೃಂಗಾರಶತಕವನ್ನು ಹೋಲುವಂತಹ 103 ಶ್ಲೋಕಗಳಿಂದ ಶಕುಂತಲೆಯ ಪಾತ್ರವನ್ನು ವರ್ಣಿಸುವಂತಹ ಖಂಡಕಾವ್ಯ 'ಜಾತಾ ಶಕುಂತಲಾ'
* ವೈದಿಕಛಂದಸ್ಸನ್ನನುಸರಿಸಿ 154 ಶ್ಲೋಕಗಳಿಂದ ರಚಿಸಿದ ಕಾವ್ಯ 'ಶಂಕರವಿವೇಕೀಯಂ'
* ವಿವೇಕಾನಂದರ ಕೊನೆಯ ದಿನವನ್ನಾಧರಿಸಿ 440 ಶ್ಲೋಕಗಳಲ್ಲಿ ಬ್ಲ್ಯಾಂಕ್‌ವರ್ಸ್‌ನಲ್ಲಿ ಬರೆದಿರುವ ಕಾವ್ಯ 'ಅಂತಃಕಾಂತಿಃ'
* ಆರು ಋತುಗಳ ಪರಿಣಾಮ ಪಟ್ಟಣಿಗರ ಹಾಗೂ ಗ್ರಾಮೀಣರ ಮೇಲೆ ಹೇಗಾಗುತ್ತದೆಂದು ವರ್ಣಿಸುವ ಕಾವ್ಯ 'ನಾಗರೀಕಋತವಃ' 'ಗ್ರಾಮೀಣಋತವಃ' ಎಂದು ವಿಭಜಿತವಾಗಿರುವ 'ಏವಮಪಿ ಋತವಃ'
* ಆಂಗ್ಲಭಾಷೆಯಲ್ಲಿರುವ ಸಾನೆಟ್‌ಗಳನ್ನು ಹೋಲುವ ಕೃತಿ 'ಸೌಗಂಧಿಕಾ'
* 87 ಮುಕ್ತಕಗಳಿರುವ ಸಂಕಲನ 'ಚಾಪುಚಂದ್ರಿಕಾ'
* ಚಿತ್ರಕಾವ್ಯ ಅಪರೂಪವಾಗುತ್ತಿರುವ ಈ ಕಾಲದಲ್ಲಿ (ಆಶುವಾಗಿ ಚಿತ್ರಕಾವ್ಯವನ್ನು ಅವಧಾನದಲ್ಲಿ ಮಾಡುವ ಏಕೈಕ ಅವಧಾನಿ ಗಣೇಶ್) ಪದ್ಮಬಂಧ, ಗೋಮೂತ್ರಿಕಾಬಂಧ, ಬಿಂಬಪ್ರತಿಬಿಂಬ ಇತ್ಯಾದಿ ಚಮತ್ಕಾರಗಳನ್ನು ಒಳಗೊಂಡಿರುವ ಕೃತಿ 'ಚಿತ್ರಮಾಲಿಕಾ'
* ಆಧುನಿಕ ಕಾಲದ ಉಡುಗೆ-ತೊಡುಗೆಗಳು, ತಿನ್ನುವ ಪದಾರ್ಥಗಳನ್ನು ವಿಡಂಬನಾತ್ಮಕವಾಗಿ ಬಳಸಿರುವ ಏಕಾಂಕನಾಟಕ 'ಅನ್ವೇಷಣಂ'
* 1994ರಲ್ಲಿ ಶ್ರೀಮಾತಾಪ್ರಕಾಶನದವರಿಂದ ಪ್ರಕಾಶಿತವಾದ ಭಕ್ತಿಪ್ರಧಾನಸ್ತೋತ್ರಕಾವ್ಯ 'ಶ್ರೀ ಚಕ್ರರಾಜೇಶ್ವರೀಸ್ತವನಂ ಕಾಮಾಕ್ಷೀಸುಪ್ರಭಾತಂ ಚ'

ಇನ್ನು ಗಣೇಶ್ ಅವರಿಂದ ರಚಿತವಾಗಿರುವ ಕೆಲವು ಕನ್ನಡ ಕೃತಿಗಳೆಂದರೆ:

1) ನಿತ್ಯನೀತಿ: ಮೈತ್ರೀಪ್ರಕಾಶನ, ಬೆಂಗಳೂರು, 1993. ಈ ಕೃತಿ 500ಕ್ಕೂ ಹೆಚ್ಚು ಸೂಕ್ತಿಗಳಲ್ಲಿ ಪ್ರತಿಯೊಂದಕ್ಕೂ ಸಮುಚಿತಶೀರ್ಷಿಕೆಯಿಂದ ಪೀಠಿಕಾಪ್ರಾಯವಾದ ನಾಲ್ಕಾರು ಶ್ಲೋಕಗಳನ್ನೂ ಫಲಶ್ರುತಿಗಳನ್ನೂ ಬಿಟ್ಟರೆ

ದಿನಕ್ಕೊಂದು ದಿನಕ್ಕೊಂದೆರಡು ಸೂಕ್ತಿಗಳಂತೆ ಅಭ್ಯಾಸಯೋಗ್ಯವೂ ಕಂಠಪಾಠಕ್ಕೆ ಸರಳವೂ ಆದ ನೀತಿಗಳು ಸಮೂಲವಾಗಿದೆ.

2) ಶತಾವಧಾನಶಾರದೆ: ಮೈತ್ರೀಪ್ರಕಾಶನ, 1995. ಕರ್ನಾಟಕದ ಪ್ರಥಮ ಸಂಪೂರ್ಣ ಶತಾವಧಾನಪದ್ಯಮಾಲಿಕೆ ಇದಾಗಿದ್ದು, 2011ರಲ್ಲಿ ಹುಬ್ಬಳ್ಳಿಯ ಸಾಹಿತ್ಯಪ್ರಕಾಶನದಿಂದ ಮರುಮುದ್ರಿತವಾಗಿದೆ.

3) ಸಾಮಾನ್ಯಧರ್ಮ: ಅಭಿಜ್ಞಾನ, 1996. ಮರುಮುದ್ರಣ ಸಾಹಿತ್ಯಪ್ರಕಾಶನ ಹುಬ್ಬಳ್ಳಿ, 2011. ಭಾರತೀಯ ಧರ್ಮಶಾಸ್ತ್ರ ವಿಶ್ವಧರ್ಮಕ್ಕೆ ನೀಡಬಲ್ಲ ಪ್ರಾಲಿಕತತ್ತ್ವ ಯಾವುದೆಂಬ ಅಂಶವೆಂದರೆ ದೇಶ, ಕಾಲ, ವಸ್ತು, ಪರಿಚ್ಛೇದವನ್ನು ಮೀರಿ ಜನ್ಮಸಂಸ್ಕಾರ, ಕರ್ಮ, ಸಿದ್ಧಿಗಳ ಭೇದವನ್ನು ದಾಟಿ ಸರ್ವದಾ, ಸರ್ವಥಾ, ಸಮಸ್ತರಿಗೂ ಉಪಾದೇಯವಾಗಬಲ್ಲ ಮಹಾಪ್ರಮೇಯವೆಂದರೆ ಸಾಮಾನ್ಯಧರ್ಮವೆಂದು ಗಣೇಶ್ ಅವರು ಇಲ್ಲಿ ಸಾಬೀತುಪಡಿಸಿದ್ದಾರೆ.

4) ಧೂಮದೂತ(ಮೇಘದೂತವಿಡಂಬನಕಾವ್ಯ): ಪ್ರತ್ಯಭಿಜ್ಞಾ ಪ್ರಕಾಶನ, 1996. ರಾಜಕೀಯ ವ್ಯವಸ್ಥೆಯನ್ನೆಲ್ಲ ಧೂಮಮಯವಾಗಿ ಮಾಡಿ ಸಾರ್ವಜನೀನಮೌಲ್ಯಗಳಿಗೆ ಮಸಿ ಬಳಿಯಲಾಗುತ್ತಿರುವುದನ್ನು ಅದ್ಭುತವಾದ ವ್ಯಂಗ್ಯ, ಅಣಕು, ಸರಕುಗಳಿಂದ ಗಣೇಶ್ ಇಲ್ಲಿ ಅನಾವರಣ ಮಾಡಿದ್ದಾರೆ. ಕೇಂದ್ರದಲ್ಲಿ ಮಂತ್ರಿಪದವಿಯಿಂದ ಚ್ಯುತನಾಗಿ ಪದವಿಯ ವಿರಹದಿಂದ ನರಳುತ್ತಾ, ಕರ್ನಾಟಕದ ತನ್ನ ಹಳ್ಳಿಯ ಕಡೆ ಬರುತ್ತಿರುವವನ ಬವಣೆ ಇದರ ಕಥಾವಸ್ತು. ಯಕ್ಷನು ಮೋಡವೇ ಸೂಕ್ತ ದೂತನೆಂದು ಅವನ ಮೂಲಕ ನಲ್ಲೆಗೆ ಸಂದೇಶವನ್ನು ಕಳುಹಿಸಲು ತೀರ್ಮಾನಿಸಿದರೆ ಇಲ್ಲಿ ನಾಯಕನು ಧೂಮದ ಮೂಲಕ ಸಂದೇಶ ಕಳುಹಿಸಲು ತೀರ್ಮಾನಿಸುತ್ತಾನೆ.

5) ಕವಿತೆಗೊಂದು ಕಥೆ: ಮೈತ್ರೀ ಪ್ರಕಾಶನ 1996. ಪ್ರಕೃತ ಸಂಕಲನ ತನ್ನ ಆಕರಗಳಿಗಾಗಿ ಅನೇಕ ವ್ಯಕ್ತಿಗಳನ್ನೂ ಗ್ರಂಥಗಳನ್ನೂ ಆಶ್ರಯಿಸಿದೆ. ಎನ್. ರಂಗನಾಥಶರ್ಮಾ, ಲಂಕಾ ಕೃಷ್ಣಮೂರ್ತಿ, ಎಚ್. ವಿ. ನಾಗರಾಜರಾವ್, ಕೆ. ಕೃಷ್ಣಮೂರ್ತಿ, ಅರೆಯರ್ ಶ್ರೀರಾಮಶರ್ಮಾ ಮುಂತಾದವರು ಹೇಳಿದ ಹತ್ತಾರು ಚಾಟುಪದ್ಯಗಳು ಈ ಕೃತಿಗೆ ಉಪಕಾರಕವಾಗಿದೆ. ಸುಪ್ರಸಿದ್ಧಸಂಸ್ಕೃತಕವಿಗಳಾದ ಕಾಳಿದಾಸನಿಂದ ಹಿಡಿದು ಎ. ಎನ್. ಮೂರ್ತಿರಾಯರ ಜೀವನದ ರಸವತ್ತಾದಘಟ್ಟಗಳು ವಿವರಣೆಹೊಂದಿಗೆ ಇಲ್ಲಿ ಮೂಡಿಬಂದಿದೆ.

6) ನೀಲಕಂಠದೀಕ್ಷಿತನ ಶತಕತ್ರಯ: ಅಭಿಜ್ಞಾನ, 1997. ನೀಲಕಂಠದೀಕ್ಷಿತ 17ನೆಯ ಶತಮಾನದ ವಿಸ್ಮಯಮೂರ್ತಿ. ಈತನ ಕಾವ್ಯಶಾಸ್ತ್ರಸಿದ್ಧಿ ಅಪೂರ್ವವಾದುದು. ಇವನ ಅನೇಕ ಕೃತಿಗಳ ಪೈಕಿ 'ಕಲಿವಿಡಂಬನ', 'ಸಭಾರಂಜನ' ಮತ್ತು 'ವ್ಯಂಗ್ಯಶತಕ'ಗಳು ಅತ್ಯಂತ ಜನಪ್ರಿಯ. ಮೂಲ, ಅನುವಾದ, ಟಿಪ್ಪಣಿಗಳನ್ನು ಪ್ರಕೃತಗ್ರಂಥದಲ್ಲಿ ಕಾಣಬಹುದಾಗಿದೆ.

7) ಷಡ್ದರ್ಶನಸಂಗ್ರಹ: ಭಾರತೀಯ ವಿದ್ಯಾಭವನ 1997ರಲ್ಲಿ ಹೊರತಂದ ಈ ಕೃತಿ ಕೇವಲ 7 ದಿನಗಳಲ್ಲಿ ರಚಿತವಾದ ಕೃತಿ. ದರ್ಶನಗಳ ವ್ಯಾಪ್ತಿ ಬಹಳ ಹಿರಿಯದು. ಅದರಲ್ಲಿಯೂ ಭಾರತೀಯದರ್ಶನಗಳ ಎತ್ತರ–ಬಿತ್ತರ–ಸೂಕ್ಷ್ಮತೆ–ಸಂಕೀರ್ಣತೆಗಳು ಮತ್ತೂ ಮಹತ್ತಾಗಿದೆ. ನಾನಾಭಾಷೆಗಳಲ್ಲಿ ಸಾಕಷ್ಟು ಬರೆವಣಿಗೆಗಳು ಇದರ ಬಗೆಗೆ ಬಂದಿವೆಯಾದರೂ, ಸಂಸ್ಕೃತ, ಆಂಗ್ಲ, ಹಿಂದೀಭಾಷೆಗಳಿಗೆ ಹೋಲಿಸಿದರೆ ಕನ್ನಡದಲ್ಲಿ ಕಡಿಮೆಯೆಂದೇ ಹೇಳಬೇಕು. ಈ ದೃಷ್ಟಿಯಲ್ಲಿ ಬಹುತೇಕ ಭಾರತೀಯದರ್ಶನಗಳಲ್ಲೆಲ್ಲಾ ಕನ್ನಡದಲ್ಲಿ ನಿರೂಪಿಸಬೇಕೆಂಬ ಆಶಯ ಈ ಗ್ರಂಥದಲ್ಲಿದೆ. ಅನುಬಂಧ 1ರಲ್ಲಿ ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಮೀಮಾಂಸಾ, ವೇದಾಂತ ಎಂಬ ಆರುದರ್ಶನಗಳೂ, ಅನುಬಂದ 2ರಲ್ಲಿ ಆಗಮಪ್ರೇರಿತವೇದಾಂತದರ್ಶನಗಳು ಹಾಗೂ ಅವೈದಿಕದರ್ಶನಗಳಾದ ಲೋಕಾಯತ, ಬೌದ್ಧ, ಜೈನಗಳೂ ನಿರೂಪಿತವಾಗಿದ್ದು, ಅನುಬಂಧ 3ರಲ್ಲಿ ಸರ್ವದರ್ಶನಸಮನ್ವಯ ತಂದಿರುವುದು ಅತ್ಯಂತ ಉಪಯುಕ್ತವಾಗಿದೆ.

8) ಸಂಧ್ಯಾದರ್ಶನಮ್: ಅಭಿನವವಿದ್ಯಾಭಾರತೀಕುಸುಮವಾದ 'ಸಂಧ್ಯಾದರ್ಶನ'ವು ಉಪನೀತರಿಗೆ ಹೊಸದೊಂದು ಬೆಳಕನ್ನು ಬೀರುವ ವಿನೂತನಗ್ರಂಥ. ಮೊದಲ ಬಾರಿಗೆ ಶ್ರುತಿ, ಸೂತ್ರ ಮತ್ತು ಪ್ರಧಾನಸ್ಮೃತಿಗಳ ಆಧಾರದಿಂದ ಗಾಯತ್ರೀಜಪ, ಸಂಧ್ಯಾವಂದನೆಯೇ ಮೊದಲಾದ ವೈದಿಕನಿತ್ಯಕರ್ಮಗಳನ್ನು ಕುರಿತ ವೈಜ್ಞಾನಿಕವೂ, ಶುದ್ಧಸಾಂಪ್ರದಾಯಿಕವೂ ಆದ ಪರಿಷ್ಕೃತವಿವರಗಳನ್ನು ಇಲ್ಲಿ ನೀಡಲಾಗಿದೆ. ನಾಲ್ಕು ವೇದಗಳವರಿಗೂ ಸಮರ್ಪಕವಾಗಿ ಸಂಧ್ಯಾವಂದನೆ ಮತ್ತು ಬ್ರಹ್ಮಯಜ್ಞವನ್ನು ಅರ್ಥಸಹಿತವಾಗಿ ಸಂಶೋಧಿಸಿ ಇಲ್ಲಿ ನೀಡಲಾಗಿದೆ. ಪ್ರಶ್ನೋತ್ತರರೂಪದಲ್ಲಿ (ಈಂಕಿ) ಸಮಗ್ರಸಂಧ್ಯೆ-ಗಾಯತ್ರೀಜಪಗಳಿಗೆ ಸಂಬಂಧಿಸಿದ ಎಲ್ಲ ಸಂದೇಹಗಳ ವಿವರಣೆ ಇಲ್ಲಿದೆ.

9) ಕನ್ನಡದಲ್ಲಿ ಅವಧಾನಕಲೆ: ಕರ್ನಾಟಕಸಂಘ, ಪುತ್ತೂರು, 1998. ಅವಧಾನಕಲೆಗೆ ಸಂಬಂಧಿಸಿದ ಸಕಲ ಅಂಗಗಳನ್ನೂ ತಲಸ್ಪರ್ಶಿಯಾಗಿ ವಿಚಾರ ಮಾಡಿ, ಆಲೋಚಿಸಿ, ಸ್ವಾನುಭವದಿಂದ ಪೋಷಿಸಿ, ಉದಾಹರಣಸಹಿತವಾಗಿ ಈಮಹಾಪ್ರಬಂಧ ವರ್ಣಿಸುತ್ತದೆ. ಹಂಪಿಯ ಕನ್ನಡವಿಶ್ವವಿದ್ಯಾಲಯವು ಡಿ.ಲಿಟ್‌ಪದವಿಯಿತ್ತು ಈ ಕೃತಿಯನ್ನು ಪುರಸ್ಕರಿಸಿದೆ. ಕನ್ನಡಸಾಹಿತ್ಯಪ್ರಪಂಚಕ್ಕೆ ಇದೊಂದು ಅನರ್ಘ್ಯಕಾಣಿಕೆ.

10)ವಿಭೂತಿಪುರುಷವಿದ್ಯಾರಣ್ಯ: ಶ್ರೀಭಗವತ್ಪಾದ ಪ್ರಕಾಶನ, ಶ್ರೀಸ್ವರ್ಣವಲ್ಲೀಸಂಸ್ಥಾನ ಸೋಂದಾದಿಂದ 2001 ರಲ್ಲಿ ಪ್ರಕಟಿತ. 2011ರಲ್ಲಿ ಹುಬ್ಬಳಿಯ ಸಾಹಿತ್ಯಪ್ರಕಾಶನದಿಂದ ಮರುಮುದ್ರಿತ. ಶ್ರೋತ್ರೀಯಬ್ರಾಹ್ಮಣವಂಶದಲ್ಲಿ ಜನಿಸಿದ ಭಾರದ್ವಾಜಗೋತ್ರದ, ತೈತ್ತಿರೀಯಯಜುಃಶಾಖೆಯ ಬೋಧಾಯನಸೂತ್ರವನ್ನನುಸರಿಸುವ ಅದ್ವೈತ ತತ್ತ್ವಾನುಯಾಯಿಯಾದ ವಿದ್ಯರಣ್ಯರ ಹಿನ್ನೆಲೆ, ಜೀವನ, ಸಾಧನೆಯನ್ನು ಈ ಕೃತಿ ಮನೋಜ್ಞವಾಗಿ ಚಿತ್ರಿಸಿದೆ.

11) ಅಲಂಕಾರಶಾಸ್ತ್ರ: ಭಾರತೀಯವಿದ್ಯಾಭವನದ ಗಾಂಧೀಕೇಂದ್ರದಿಂದ 2002ರಲ್ಲಿ ಈ ಕೃತಿ ಪ್ರಕಟವಾಗಿದೆ. ಕಾವ್ಯಮೀಮಾಂಸೆಯ ಮೂಲತತ್ತ್ವಗಳಿಗೆ ಅಪಚಾರಮಾಡದಂತೆ ಶಾಸ್ತ್ರದ ಸಮಗ್ರತೆ, ಮಹೋನ್ನತಿ ಮತ್ತು ಸರ್ವಕ್ಷಮತೆಯನ್ನು ಎತ್ತಿತೋರಿಸಲೆಂದು, ಸಂಸ್ಕೃತಮೂಲಗ್ರಂಥಗಳನ್ನಷ್ಟೇ ಅಲ್ಲದೆ ಇಂಗ್ಲಿಷ್, ಕನ್ನಡ, ಹಿಂದಿ, ತೆಲುಗು, ಮರಾಠೀಭಾಷೆಯಲ್ಲಿರುವ ಅನೇಕ ದ್ವಿತೀಯಸ್ತರದ ಆಕರಗ್ರಂಥಗಳನ್ನು ಕೂಡ ವಿಪುಲವಾಗಿ ಇಲ್ಲಿ ಬಳಸಿಕೊಳ್ಳಲಾಗಿದೆ. ಅಲಂಕಾರಶಾಸ್ತ್ರದ ಔಚಿತ್ಯ, ಅನುಬಂಧಚತುಷ್ಟಯ, ಧ್ವನಿಪರಂಪರೆ, ಧ್ವನಿವಿರೋಧಿಗಳು, ಪರಿಷ್ಕಾರಯುಗ, ಆಧುನಿಕಯುಗ, ಅಲಂಕಾರಶಾಸ್ತ್ರದ ತತ್ತ್ವವಿಕಾಸವನ್ನು ಈ ಗ್ರಂಥ ಚೊಕ್ಕವಾಗಿ ಮೂಡಿಸುತ್ತದೆ.

12) ವಿತಾನ: ಸಾಹಿತ್ಯಪ್ರಕಾಶನ, ಹುಬ್ಬಳಿಯಿಂದ 2011ರಲ್ಲಿ ಮರುಮುದ್ರಣ ಕಂಡ ಈ ಕೃತಿ ಅನೇಕ ವಿಷಯಗಳಿಂದ ಕೂಡಿದ ಕನ್ನಡಪದ್ಯಗಳ ಸಂಕಲನವಾಗಿದೆ. ಮುನ್ನುಡಿಯಲ್ಲಿ ಮಹಾಮಹೋಪಾಧ್ಯಾಯ ಡಾ॥ ರಾ. ಸತ್ಯನಾರಾಯಣರ ಅಭಿಪ್ರಾಯದಂತೆ, ಈ ಕೃತಿ 'ಭೌತಿಕವಿಜ್ಞಾನ-ಬ್ರಹ್ಮವಿಜ್ಞಾನಗಳಿಗೆ ಭಾವಬಂಧದಸೇತುವನ್ನು ನಿರ್ಮಿಸುವಷ್ಟು ವಿಶಾಲವಾಗಿದೆ. ಈ ಕವನಗಳಲ್ಲಿ ಬರಿಯ ಶುಷ್ಕಮನೀಷೆ ಇಲ್ಲದೆ, ವೇದನೆ-ಸಂವೇದನೆಗಳ ಹೃದಯಸ್ಪಂದನವಿದೆ.

13)ಕಾವ್ಯಕಲ್ಪ: ಸಾಹಿತ್ಯಪ್ರಕಾಶನ ಹುಬ್ಬಳ್ಳಿಯಿಂದ 2011ರಲ್ಲಿ ಪ್ರಕಟಿತವಾದ ಈ ಕೃತಿ ಸಂಯುಕ್ತಕರ್ನಾಟಕಕ್ಕಾಗಿ ಬರೆದ ಅಂಕಣಬರೆಹಗಳ ಸಂಕಲನವಾಗಿದೆ.

14) ಬ್ರಹ್ಮಪುರಿಯ ಭಿಕ್ಷುಕ: ಡಿ.ವಿ.ಜಿ.ಯವರ ಜೀವನದ ನೂರಾರು ರಸಪ್ರಸಂಗಗಳನ್ನೊಳಗೊಂಡ ಈ ಕೃತಿ ಸಾಹಿತ್ಯಪ್ರಕಾಶನ ಹುಬ್ಬಳ್ಳಿಯಿಂದ 2011ರಲ್ಲಿ ಪ್ರಕಟವಾಗಿದೆ.

15)ಸರ್ವತಂತ್ರಸ್ವತಂತ್ರ: 2005ರ ಡಿಸೆಂಬರ್ನಲ್ಲಿ ವಿ.ಸೀ. ಸಂಪದದಿಂದ ಪ್ರಕಾಶನವಾದ ಈ ಕೃತಿ ಪ್ರೊ. ಸಾ. ಕೃ. ರಾಮಚಂದ್ರರಾಯರ ಜೀವನ-ಲೇಖನ ಪರಿಚಯವನ್ನು ಮನೋಜ್ಞವಾಗಿ ಮಾಡಿಕೊಡುತ್ತದೆ.

16)ವಾಣೀವಾಹನ: 2008ರಲ್ಲಿ ವಿ. ಸೀ. ಸಂಪದದಿಂದ ಪ್ರಕಟಿತವಾದ ಈ ಕೃತಿ ಮಹಾಮಹೋಪಾಧ್ಯಾಯ ಎನ್. ರಂಗನಾಥಶಾರ್ಮಾರವರ ಜೀವನ–ಸಾಹಿತ್ಯವನ್ನು ಮನೋಜ್ಞವಾಗಿ ಪರಿಚಯಿಸುತ್ತದೆ.

17)ಇವಲ್ಲದೆ, ಭಾರತೀಯವಿದ್ಯಾಭವನದ 'ಗಾಂಧೀಸೆಂಟರ್ ಆಫ್ ಸೈನ್ಸ್ ಆಂಡ್ ಹ್ಯೂಮನ್ ವ್ಯಾಲ್ಯೂಸ್' ವತಿಯಿಂದ ಡಾ॥ ಎಚ್. ಕೆ. ರಂಗನಾಥ್ ಅವರ ನಿರ್ದೇಶನದಲ್ಲಿ ಪ್ರಕಟಗೊಂಡ Human Values for the young series ನಲ್ಲಿಅವರಿಂದ Human Values in Manusmriti (1998), Human Values in Ramayana (1998) ರಚಿತವಾಗಿ ಅತ್ಯಂತ ಜನಪ್ರಿಯತೆ ಗಳಿಸಿವೆ. ಈ ಕೃತಿಗಳಲ್ಲಿ ಮನುಸ್ಮೃತಿ ಹಾಗೂ ರಾಮಾಯಣದಿಂದ ಶಾಶ್ವತಮೌಲ್ಯಗಳನ್ನು ನಿರೂಪಿಸುವ ವಾಕ್ಯಗಳನ್ನು ಹೊರತೆಗೆದು, ವಿಷಯಕ್ಕೆ ಅನುಗುಣವಾಗಿ ವಿಂಗಡಿಸಿ, ಅವಕ್ಕೆ ಆಂಗ್ಲಭಾಷೆಯ ಅನುವಾದವನ್ನೂ ನೀಡಲಾಗಿದೆ. ಕರ್ನಾಟಕದಲ್ಲಿ ನೆಲೆಸಿರುವ ಕನ್ನಡ ಬಾರದ ಇತರ ಜನಾಂಗದವರಿಗೆ ಹಾಗೂ ವಿದ್ಯಾರ್ಥಿಸಮೂಹಕ್ಕೆ ಈ ಪುಸ್ತಕಗಳು ಅತೀವ ಉಪಕಾರಕವಾಗಿವೆ.

ಈ ಎಲ್ಲ ಕೃತಿಗಳಲ್ಲೂ ಕಂಡು ಬರುವ ಸಾಮಾನ್ಯ ಅಂಶವೆಂದರೆ, ಗಣೇಶ್ ಅವರೇ ತಮ್ಮ 'ಅಲಂಕಾರಶಾಸ್ತ್ರ' ಕೃತಿಯ ಅರಿಕೆಯ ಭಾಗದಲ್ಲಿ ಹೇಳಿರುವುದು: 'ಇಲ್ಲಿ ಉದ್ಧರಿಸಿರುವ, ಉಲ್ಲೇಖಿಸಿರುವ ಯಾವುದೇ ಮೂಲಗ್ರಂಥವನ್ನೂ ಸ್ವಯಂ ಅಭ್ಯಸಿಸದೆ ಏನನ್ನೂ ಬರೆದಿಲ್ಲವೆಂದೂ, ಇಲ್ಲಿಯ ನಿಗಮನಗಳ ಹಾಗೂ ವಿಶ್ಲೇಷಣೆ–ಮೌಲ್ಯಮಾಪನಗಳ ಸಾಧಕ–ಬಾಧಕಗಳಿಗೆ ನನ್ನ ವ್ಯಾಸಂಗ ಮತ್ತು ವಿಮರ್ಶನದೃಷ್ಟಿಗಳೇ ಹೊಣೆಯೆಂದೂ ಸ್ಪಷ್ಟಪಡಿಸಲು ಬಯಸುತ್ತೇನೆ. ಭಾರತೀಯಕಾವ್ಯಮೀಮಾಂಸೆಯ ಮೂಲತತ್ತ್ವಗಳಿಗೆ ನಾನು ಯಾವುದೇ ಅಪಚಾರವನ್ನು ಮಾಡಿಲ್ಲವೆಂದು ನಂಬಿದ್ದೇನೆ. ಮಿಗಿಲಾಗಿ, ಈ ಶಾಸ್ತ್ರದ ಸಮಗ್ರತೆ, ಮಹೋನ್ನತಿ ಮತ್ತು ಸರ್ವಕ್ಷಮತೆಯನ್ನು ಎತ್ತಿತೋರಿಸಲೆಂದೇ ಪ್ರಾಮಾಣಿಕವಾಗಿ ಯತ್ನಿಸಿದ್ದೇನೆ. ಈ ಬಗೆಗೆ ಜಿಜ್ಞಾಸುಗಳೊಡನೆ ಸರ್ವದಾ ಸಂವಾದಕ್ಕೆ ಸಿದ್ಧನಿರುವೆ.' ಇಲ್ಲಿ ಗಣೇಶ್‌ರವರ ಮುಕ್ತಮನಸ್ಸು ಹಾಗೂ ನಿಖರಪ್ರಜ್ಞೆಯನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ.

ಗ್ರಂಥರಚನೆ ಗಣೇಶ್‌ರವರ ಒಂದು ಮುಖವಾದರೆ, ಅವರ ಸಾವಿರಾರು ಪ್ರವಚನಗಳು, ಬಿಡುವಿಲ್ಲದಿದ್ದರೂ ನೂರಾರು ಗ್ರಂಥಗಳಿಗೆ ಅವರು ಬರೆದಿರುವ ಮುನ್ನುಡಿಗಳು, ಕೇಳಿದವರ ಕೃತಿಗಳ ಲೋಕಾರ್ಪಣೆಕಾರ್ಯ (ಇಲ್ಲಿ ನನ್ನ ಕೃತಿಯಾದ 'ಬೆಲ್ಲಂಕೊಂಡರಾಮರಾಯಕವಿ'ಯನ್ನು ಶಂಕರಜಯಂತಿ ಮಂಡಳಿಯಲ್ಲಿ ಎರಡು ವರ್ಷಗಳ ಹಿಂದೆ ಲೋಕಾರ್ಪಣೆ ಮಾಡಿ ಕೃತಿಪರಿಚಯ ಮಾಡಿದುದನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತೇನೆ), ನೂರಾರು ದನಿಸುರುಳಿಗಳಿಗೆ ಅವರು ಸಹಕರಿಸಿರುವ ವಿಧಾನ, ದೂರದರ್ಶನ–ಆಕಾಶವಾಣಿಗಳ ಅನೇಕವಾಹಿನಿಗಳಿಗೆ ಅವರು ನೀಡಿರುವ ಕಾರ್ಯಕ್ರಮಗಳು, ಮನೆಯಲ್ಲಿ ಪಾಕಕಲೆ, ತಾಯಿ ಹಾಗೂ ಅಣ್ಣನವರ ಆರೈಕೆ –ಇವೆಲ್ಲವನ್ನೂ ಜೊತೆಜೊತೆಗೇ ನಡೆಸಿಕೊಂಡು ಹೋಗುತ್ತಿರುವುದು ಕೇವಲ ಅಸಾಮಾನ್ಯವ್ಯಕ್ತಿಗಳಿಗೆ ಸಾಧ್ಯವೇ ಹೊರತು ಸಾಮಾನ್ಯರು ಮೇಲೆ ಹೇಳಿದ ಯಾವ ಒಂದನ್ನೂ ಸಮರ್ಥವಾಗಿ ನಿರ್ವಹಿಸಲಾರರು.

ಬಿ.ಇ. ಮೆಕ್ಯಾನಿಕಲ್, ಎಂ.ಎಸ್ಸಿ. ಇಂಜಿನಿಯರಿಂಗ್, ಎಂ.ಎ. ಸಂಸ್ಕೃತ, ಡಿ.ಲಿಟ್. ಕನ್ನಡ, ಗ್ರೀಕ್–ಲ್ಯಾಟಿನ್‌ಗಳೂ ಸೇರಿ ಹದಿನೇಳು ಭಾಷೆಗಳ ಪರಿಣತಿ, ಭಾರತೀಯಸಾಹಿತ್ಯ, ಸಂಸ್ಕೃತಿ, ವಿಜ್ಞಾನ, ಅಧ್ಯಾತ್ಮ, ಕಲೆ, ಇತಿಹಾಸಗಳಲ್ಲಿ ಗಾಢಪ್ರೀತಿ, ಅಲಂಕಾರ, ಛಂದಸ್ಸು, ವೇದ–ವೇದಾಂತ, ಧರ್ಮಶಾಸ್ತ್ರ, ನೃತ್ಯ, ನಾಟಕ, ಯಕ್ಷಗಾನ, ಚಿತ್ರಶಿಲ್ಪ, ಸಂಗೀತಾದಿಗಳಲ್ಲಿ ಪರಿಶ್ರಮ, ಭಾರತೀಯವಿಜ್ಞಾನ, ತಂತ್ರಜ್ಞಾನ, ಸೌಂದರ್ಯಮೀಮಾಂಸೆ ಮತ್ತು ಮೌಲ್ಯಮೀಮಾಂಸೆಗಳಲ್ಲಿ ದುಡಿದ ಅನುಭವ, 962 ಅಷ್ಟಾವಧಾನಗಳನ್ನೂ (ಇವುಗಳಪೈಕಿ 500ಕ್ಕೂ ಹೆಚ್ಚು ಅವಧಾನಗಳಲ್ಲಿ ಪೃಚ್ಛಕನಾಗುವ ಭಾಗ್ಯ ನನ್ನದಾಗಿದೆ) ಶತಾವಧಾನಗಳನ್ನೂ ನಿರ್ವಹಿಸಿ ಈಗ ಐದನೆಯ ಶತಾವಧಾನ ಕಾರ್ಯಕ್ರಮಕ್ಕೆ ಸಮ್ಮತಿಸಿರುವ ಗಣೇಶರನ್ನು, 'ನ ರತ್ನಮನ್ವಿಷ್ಯತಿ ಮೃಗ್ಯತೇ ಹಿ ತತ್' ಎಂಬ ಕಾಳಿದಾಸೋಕ್ತಿಯಂತೆ, ಅರಸಿ ಬಂದಿರುವ ಪ್ರಶಸ್ತಿಗಳು

ಹಲವಾರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ರಾಜ್ಯೋತ್ಸವಪ್ರಶಸ್ತಿ, ಅತ್ಯುತ್ತಮರಾಷ್ಟ್ರೀಯಯುವಪ್ರತಿಭಾಪ್ರಶಸ್ತಿ, ಕಾವ್ಯಕಂಠಪ್ರಶಸ್ತಿ, ಬಾದರಾಯಣ ವ್ಯಾಸ ಪುರಸ್ಕಾರ್, ಅವಿಲಂಬಸರಸ್ವತೀ ಪ್ರಶಸ್ತಿ, ಪುರುಷಸರಸ್ವತೀ ಪ್ರಶಸ್ತಿ ಹಾಗೂ ಕೆಂಪೇಗೌಡ ಪ್ರಶಸ್ತಿ. ಇವರ 24ಘಂಟೆಗಳ ಸತತ ಆಶುಕವಿತೆ ವಿಶ್ವದಾಖಲೆಯಾಗಿದೆ.

ಮಹಾಮಹೋಪಾಧ್ಯಾಯ ಡಾ॥ ರಾ. ಸತ್ಯನಾರಾಯಣ ಅವರ ಮಾತನ್ನು ಉಲ್ಲೇಖಿಸುವುದಾದರೆ, 'ಶತಾವಧಾನಿ ಗಣೇಶ್‌ರವರು ತಮ್ಮ ಬಹುಮುಖವಿಭೂತಿಯಿಂದ ಕನ್ನಡಿಗರ ಗೌರವ, ಆದರ, ಅದ್ಭುತಭಾವದ ಮೆಚ್ಚುಗೆಗಳನ್ನು ಗಳಿಸಿದ್ದಾರೆ. ಯಾವುದೇ ಛಂದಸ್ಸಿನಲ್ಲಿ ಯಾವುದೇ ವಿಷಯದಲ್ಲಿ ಕಾವ್ಯರಚನೆಯನ್ನು ಆಶುಸ್ಫೂರ್ತಿಯಿಂದ ಕೈಗೊಳ್ಳುವ ಅಪೂರ್ವಶಕ್ತಿ ಅವರಿಗಿದೆ. ಗಣೇಶ್ ಅವರ ಕಾವ್ಯಪ್ರತಿಭೆ ಸ್ವಚ್ಛಂದ-ಸ್ವೈರವಲ್ಲ; ಶಾಸ್ತ್ರಸಂಸ್ಕಾರದಿಂದ ಕಿಲುಬನ್ನು ಕಳೆದುಕೊಂಡು ರುಚಿ-ಶುಚಿಯಾಗಿದೆ.' ('ವಿತಾನ' ಕೃತಿಯ ಮುನ್ನುಡಿಯಿಂದ).

ಡಾ॥ ಕೆ. ಕೃಷ್ಣಮೂರ್ತಿಯವರು 'ಮಧುಸದ್ಮ' ಕೃತಿಯ ಮುನ್ನುಡಿಯಲ್ಲಿ ಹೇಳಿರುವ ಈ ಮಾತುಗಳು ಅತ್ಯಂತ ಹೃದಯಸ್ಪರ್ಶಿ: Poetry runs in the very breath of Ganesh. He has written extensively both in Kannada and Sanskrit in a wide variety of literary forms from pearl like verse to century of them and from lyrical to dramatic and narrative modes. Ganesh is one who has really enjoyed the poetry of the past classical masters and is inspired to write like them because he cannot suppress the call from within and who takes for his subject his own impression of present day life while giving them form like the classics. If can be truly said of him that:

A poet in a golden time was born
With golden stars above;
Powered with the hate of hate
The scorn of scorn,
The love of love

### ಗಣೇಶ್ ಅವರ ಕಾರ್ಯವ್ಯಾಪ್ತಿ

ಗಣೇಶ್ ಅವರ ಕಾರ್ಯವ್ಯಾಪ್ತಿ ಅತ್ಯಂತ ವಿಸ್ತಾರವಾದುದು. ಆರ್. ವಿ. ಕಾಲೇಜ್ ಆಫ್ ಇಂಜಿನಿಯರಿಂಗ್, ಎಂ. ಎಸ್. ರಾಮಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್, ಜೈನ್‌ಪ್ರೆಸಿಡೆನ್ಸಿಯಲ್ ಸ್ಕೂಲ್, ಭಾರತೀಯ ವಿದ್ಯಾಭವನ, ಭಾರತೀಯ ವಿಜ್ಞಾನ ಮಂದಿರ, ಇಂದಿರಾಗಾಂಧೀ ನ್ಯಾಶನಲ್‌ಸೆಂಟರ್ ಆಫ್ ಆರ್ಟ್ಸ್ ಇತ್ಯಾದಿ ಸಂಸ್ಥೆಗಳಲ್ಲಿ ಹಲವಾರು ವರ್ಷಗಳು ಸಾರ್ಥಕಸೇವೆ ಗೈದು ಜನಸಾಮಾನ್ಯರಲ್ಲಿ ನೈತಿಕ ಹಾಗೂ ಶಾಶ್ವತಮೌಲ್ಯಗಳ ಬಗೆಗೆ ಜಾಗೃತಿ ಮೂಡಿಸಲು ಸುಮಾರು ಮೂರು ದಶಕಗಳಿಂದ ಭಾರತೀಯವಿದ್ಯಾಭವನ, ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಗಾಂಧೀ ಸಾಹಿತ್ಯ ಸಂಘ, ಅಧ್ಯಾತ್ಮ ಪ್ರಕಾಶನ ಕಾರ್ಯಾಲಯ, ಶಂಕರಜಯಂತಿ ಮಂಡಳಿ, ವಿ. ಸೀ. ಸಂಪದ, ಬಿ. ಎಂ. ಶ್ರೀ. ಪ್ರತಿಷ್ಠಾನಗಳಲ್ಲಿ ಪ್ರವಚನಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಭ್ಯಾಗತ ಆಚಾರ್ಯತ್ವ, ಪಿ.ಎಚ್.ಡಿ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ಎಂ.ಎ. ವಿದ್ಯಾರ್ಥಿಗಳಿಗೆ ಸತತವಾಗಿ ಮಾರ್ಗದರ್ಶನ ಮಾಡುತ್ತಾ ಬರುತ್ತಿದ್ದಾರೆ. ಇದೇ ಅಲ್ಲದೆ ಅನೇಕ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕಸಂಸ್ಥೆಗಳಲ್ಲಿ ಸನಾತನಸಂಸ್ಕೃತಿಯ ಪ್ರಚಾರ-ಪ್ರಸಾರಗಳನ್ನು ಮಾಡುತ್ತಲೇ ಬರುತ್ತಿದ್ದಾರೆ. ಜಯೇಂದ್ರಸರಸ್ವತೀಸ್ವಾಮಿಗಳ 75ನೆಯ

ವರ್ಧಂತ್ಯುತ್ಸವದಂದು ಕಾರಣಾಂತರಗಳಿಂದ ಗಣೇಶ್ ಅವರು ಭಾಗವಹಿಸಲಾಗದಿದ್ದುದರಿಂದ ಅವರು ನನ್ನನ್ನು ಸ್ಮರಿಸಿಕೊಂಡು ನನ್ನನ್ನು ಕಳುಹಿಸಿದ್ದಕ್ಕೆ ನಾನು ಅವರಿಗೆ ಆಭಾರಿಯಾಗಿದ್ದೇನೆ.

**ಗಣೇಶ್ ಅವರಿಗೂ ಎನ್.ಎಂ.ಕೆ.ಆರ್.ವಿ. ಸಂಸ್ಥೆಗೂ ಇರುವ ನಂಟು**

1989ರಲ್ಲಿ 'ಮಧುಸದ್ಮ' ಕೃತಿ ಎನ್.ಎಂ.ಕೆ.ಆರ್.ವಿ. ಕಾಲೇಜಿನಲ್ಲಿ ಬಿಡುಗಡೆಯಾದಾಗಿನಿಂದಲೂ ಗಣೇಶ್‌ಅವರು ಕಾಲೇಜಿನ ಅವಿಭಾಜ್ಯ ಅಂಗವಾಗಿದ್ದಾರೆ. ಸಂಸ್ಕೃತವಿಭಾಗದ ವತಿಯಿಂದ ನಡೆಸಿದ 'ದಂಡಿಸಮಾರೋಹ', ಆರ್. ವಿ. ಸಂಸ್ಕೃತ ಅಧ್ಯಯನ ಸಂಸ್ಥೆಯಿಂದ 2007ರಲ್ಲಿ ನಡೆಸಿದ Relevance of Advaita to Modern Times, 2012ರಲ್ಲಿ '35 years of creative writing in Sanskrit' ಕುರಿತು ನೀಡಿದ ಉಪನ್ಯಾಸ, ಕಾವ್ಯ, ನೃತ್ಯ, ಚಿತ್ರ, ಗಾನಕಾರ್ಯಕ್ರಮಗಳೇ ಅಲ್ಲದೆ ತಮ್ಮ 851ನೆಯ ಅಷ್ಟಾವಧಾನವನ್ನೂ ಕಾಲೇಜಿನಲ್ಲಿಯೇ ನಡೆಸಿ, ಪದವಿ ವಿದ್ಯಾರ್ಥಿನಿಯರಿಗೆ ನೈತಿಕಮೌಲ್ಯಗಳ ಬಗೆಗೆ ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ. ಈಗ ಇವರ ಐದನೆಯ ಶತಾವಧಾನಕಾರ್ಯಕ್ರಮವು ಕಾಲೇಜಿನ ಮಂಗಳಾಮಂಟಪದಲ್ಲಿ ನವೆಂಬರ್ 30ರಿಂದ ಡಿಸೆಂಬರ್ 2ರವರೆಗೆ ನಡೆಯುತ್ತಿರುವುದು ಗಣೇಶ್ ಅವರ ಹಾಗೂ ಎನ್.ಎಂ.ಕೆ.ಆರ್.ವಿ. ಕಾಲೇಜಿನ ನಂಟನ್ನು ಗಟ್ಟಿಗೊಳಿಸಿದೆ.

**ಗಣೇಶ್ ಎಂದರೆ ನಡೆದಾಡುವ ವಿಶ್ವಕೋಶ**

ತಮ್ಮ ಅದ್ಭುತಜ್ಞಾಪಕಶಕ್ತಿಯಿಂದ ಹಾಗೂ ಅಪಾರವಾದ ಅಧ್ಯಯನದಿಂದ ಯಾರಿಗೆ ಯಾವುದೇ ಆಕರಗ್ರಂಥಗಳ ಬಗೆಗೆ ಸಂದೇಹವುಂಟಾದರೂ ತತ್ಕ್ಷಣ ಮೊರೆಹೋಗಬೇಕಾದ ವ್ಯಕ್ತಿಯೆಂದರೆ ಗಣೇಶ್. ನಾವು ಕೇಳಿದ ಶ್ಲೋಕಕ್ಕೆ ತತ್ಕ್ಷಣವೇ ಆಕರವನ್ನು ನೀಡಿ ನಮಗೆ ಸಹಕರಿಸುವ ಸೌಜನ್ಯಶೀಲಸನ್ಮಿತ್ರರೆಂದರೆ ಗಣೇಶ್. ನನಗೆ ಅನೇಕ ಬಾರಿ ಬಂದಿರುವ ಸಂದೇಹಗಳಿಗೆ ಗಣೇಶ್ ಅವರು ಕೂಡಲೇ ಪರಿಹಾರ ಸೂಚಿಸಿ ಮಹದುಪಕರಿಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಋಣಿ.



“ಸುಮಾರು ಹದಿನೈದು ವರ್ಷಗಳ ಹಿಂದೆ ಶತಾವಧಾನಿ ಡಾ॥ ರಾ. ಗಣೇಶ್ ಅವರನ್ನು ಕುರಿತು ಒಂದು ಸಂದರ್ಭದಲ್ಲಿ ಮಾತನಾಡುವಾಗ ಅವರನ್ನು ‘ವಿದ್ವಲ್ಲೋಕದ ವಿಸ್ಮಯ’ ಎಂದು ವರ್ಣಿಸಿದ್ದೆ. ಅದೇಕೋ ಈ ವರ್ಣನೆ ನೆಲೆನಿಂತು ಆಗಿಂದಾಗ ಬಳಕೆಯಾಗುತ್ತ ಬಂದಿದೆ. ಈ ವರ್ಣನೆಯೇನೋ ಸಮುಚಿತವೇ. ಆದರೆ ಗಣೇಶ್ ಅವರ ವ್ಯಕ್ತಿತ್ವಕ್ಕೆ ವಿದ್ವತ್ತನ್ನು ಮೀರುವ ಆಯಾಮಗಳಿವೆ. ವಿದ್ವತ್ತೆ ಅವರಿಗೆ ನಮ್ಮ ಸಂಸ್ಕೃತಿಯ ಹೃದಯವನ್ನು ಪ್ರಕಾಶಪಡಿಸುವ ಸಾಧನವಾಗಿ ಒದಗಿಬಂದಿದೆ. ಸಂಸ್ಕೃತಿಯ ಪ್ರತಿಪಾದಕರಾಗಿಯೂ ಸಮರ್ಥಕರಾಗಿಯೂ ವಿಕೃತಿಪ್ರಸರಣಪ್ರಯಾಸಗಳ ವಿರುದ್ಧ ತಡೆಗೋಡೆಯಾಗಿಯೂ, ವಿವಿಧ ಬಗೆಗಳಲ್ಲಿ ಸಮಾಜದಲ್ಲಿ ಸದಭಿರುಚಿಯ ಪೋಷಣೆ–ವರ್ಧನೆಗಾಗಿಯೂ ಅವರು ಸತತ ಪ್ರಯತ್ನಶೀಲರಾಗಿದ್ದಾರೆ. ಈ ದೆಸೆಯಲ್ಲಿ ಇಷ್ಟು ವ್ಯಾಪಕವಾದ ಮತ್ತು ಮೇಲ್ಮಟ್ಟದ ಕೈಂಕರ್ಯ ಸಲ್ಲಿಸುತ್ತಿರುವವರು ಬಹುಶಃ ನಮ್ಮ ನಡುವೆ ಬೇರೊಬ್ಬರಿಲ್ಲ. ಗಣೇಶ್ ಅವರು ಗಳಿಸಿಕೊಂಡಿರುವ ವ್ಯುತ್ಪತ್ತಿ, ಅವರು ಬೆಳಸಿಕೊಂಡಿರುವ ಸಮಾಜಹಿತಸಾಧನಾಕಾಂಕ್ಷೆ – ಎರಡಕ್ಕೂ ನಮ್ಮ ನಮನ ಸಲ್ಲಬೇಕಾಗುತ್ತದೆ.”

– ಡಾ॥ ಎಸ್. ಆರ್. ರಾಮಸ್ವಾಮಿ.<br>
ಗೌರವಕಾರ್ಯದರ್ಶಿಗಳು,<br>
ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಮತ್ತು<br>
ಉತ್ಥಾನ ಮಾಸಪತ್ರಿಕೆಯ ಪ್ರಧಾನ ಸಂಪಾದಕರು